ಶ್ರೀ ಶಿವಾನಂದ ಎಸ್. ಪಾಟೀಲ್ : ಮಾನ್ಯ ಉಪಾಧ್ಯಕ್ಷರೆ, ಒಂದು ನಿಮಿಷ....

ಉಪಾಧ್ಯಕ್ಷರು : ಎಷ್ಟು ಪ್ರಶ್ನೆಗಳನ್ನು ಕೇಳುತ್ತೀರಿ?

ಶ್ರೀ ಶಿವಾನಂದ ಎಸ್. ಪಾಟೀಲ್ : ಮಾನ್ಯ ಉಪಾಧ್ಯಕ್ಷರೆ, ಇಲ್ಲಿ ನೋಡಿ. ಉತ್ತರ ತಪ್ಪು ಇದೆ. ಬಿಜಾಪುರ ಜಿಲ್ಲೆಯಲ್ಲಿ ಒಂದೂ ಶುಗರ್ ಫ್ಯಾಕ್ಟರಿ ಕೂಡ ಇಲ್ಲ. This, you are going to admit or not?

ಉಪಾಧ್ಯಕ್ಷರು : ಒಂದು ವಾರದಲ್ಲಿ ಕ್ಲಿಯರ್ ಮಾಡಿಕೊಡುತ್ತೇನೆ ಎಂದು ಮಂತ್ರಿಗಳು ಸ್ಪಷ್ಟವಾಗಿ ಹೇಳಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಉಪಾಧ್ಯಕ್ಷರೆ, ಇದು ಎನಾಗಿದೆ ಎಂದರೆ ಪ್ರತಿಸಲವೂ ಇದನ್ನು ಅವಾಯ್ಡ್ ಮಾಡುತ್ತಿದ್ದಾರೆ. ನಾನು ನೇರವಾಗಿ ಆಪಾದನೆ ಮಾಡುತ್ತಿದ್ದೇನೆ. ಕೇವಲ ರಾಜಕೀಯ ಹಿತಾಸಕ್ತಿ ಸಲುವಾಗಿ ಇದನ್ನು ನೀವು ಪೆಂಡಿಂಗ್ ಇಡುತ್ತಿದ್ದೀರಿ.

ಶ್ರೀ ಆರ್.ವಿ. ದೇಶಪಾಂಡೆ : ಅವರು ಈ ರೀತಿ ಆಪಾದನೆ ಮಾಡಿದರೆ ಹೇಗೆ? ಅವರು ಕೇಳಿದ್ದಕ್ಕೆ ಸರಿಯಾದ ಜವಾಬು ಕೂಡ ಹೇಳಿದ್ದೇನೆ. ಆದರೆ ಈ ಪ್ರಕಾರ ವಿರೋಧ ಪಕ್ಷದ ನಾಯಕರು ಆರೋಪ ಮಾಡಿದರೆ – then I will have my own way. The Government will decide in its own way. I am not going to oblige him.

(ಗೊಂದಲ)

ಶ್ರೀ ಎಂ. ಮಹದೇವ್ : ರಾಜಕೀಯ ಹಿತಾಸಕ್ತಿ ಇದ್ದರೆ; ನಮಗೂ ರಾಜಕೀಯ ಮಾಡುವುದಕ್ಕೆ ಬರುತ್ತದೆ.

ಶ್ರೀ ಜಗದೀಶ್ ಶೆಟ್ಟರ್ : ಅದನ್ನೇ ಮಾಡುವುದಕ್ಕೆ ಈಗ ಹತ್ತಿದ್ದೀರಿ. ಒಂದು ವರ್ಷದಿಂದ ಅದೇ ಆಯಿತು.

ಶ್ರೀ ಎಂ. ಮಹದೇವ್ : ನಮಗೆ ಎಲ್ಲರಿಗೂ ಸಹಾಯ ಮಾಡಬೇಕೆಂದು ಇದೆ.

ಉಪಾಧ್ಯಕ್ಷರು : ಆಯಿತು. ಮುಂದಿನ ಪ್ರಶ್ನೆ (ಸಂಖ್ಯೆ: 5373) ಮಾನ್ಯ ಅಂಗಾರ ಅವರದ್ದು ಸಮಾಜ ಕಲ್ಯಾಣ ಇಲಾಖೆಯಿಂದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯಿತ್ ರಾಜ್ ಇಲಾಖೆಗೆ ವರ್ಗಾಯಿಸಲಾಗಿದೆ.

ಜವಳಿ ಉದ್ಯಮದ ಪುನರುಜ್ಜೀವನದ ಬಗ್ಗೆ

626 (5366) : ಶ್ರೀ ಎ.ಎಸ್. ಗುರುಸ್ವಾಮಿ (ಚಾಮುಂಡೇಶ್ವರಿ) ಮಾನ್ಯ ರೇಷ್ಮೆ ಮತ್ತು ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಆಮದು ರೇಷ್ಮೆ ಮತ್ತು ಜವಳಿ ಇಂದಾಗಿ ಸ್ಥಳೀಯ ಜವಳಿ ಉದ್ದಿಮೆಗೆ ಪೆಟ್ಟು ಬಿದ್ದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ ರೇಷ್ಮೆ ಮತ್ತು ಜವಳಿ ಉದ್ದಿಮೆಯನ್ನು ಪುನರುಜ್ಜೀವನಗೊಳಿಸಿ ಹಿಂದಿನ ಜನಪ್ರಿಯತೆಯನ್ನು ಗಳಿಸಿಕೊಳ್ಳಲು ಸರ್ಕಾರ ತೆಗೆದುಕೊಂಡಿರುವ ಕ್ರಮವೇನು?

ಇ) ರೇಷ್ಮೆ ಮತ್ತು ಜವಳಿ ನೇಕಾರರು ಗುಳೆ ಹೋಗುತ್ತಿರುವ ಪರ್ಯಾಯ ವ್ಯವಸ್ಥೆ ಕಂಡುಕೊಳ್ಳುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹೌದಾದರೆ ನೇಕಾರರು ತಮ್ಮ ವೃತ್ತಿಗೆ ಮರಳಲು ತೆಗೆದುಕೊಂಡಿರುವ ಕ್ರಮಗಳೇನು?

ಉ) ಕರ್ನಾಟಕ ರೇಷ್ಮೆ ಮತ್ತು ಜವಳಿ ಉತ್ಪನ್ನಗಳನ್ನು ಜನಪ್ರಿಯಗೊಳಿಸಲು ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಹೆಚ್.ಎಂ. ರೇವಣ್ಣ (ರೇಷ್ಮೆ ಮತ್ತು ಜವಳಿ ಸಚಿವರು)

ಅ) ಬಂದಿದೆ

ಆ) ರೇಷ್ಮೆ ಕುರಿತಂತೆ ಈ ಕೆಳಗಿನ ಕ್ರಮಗಳನ್ನು ಕೈಗೊಳ್ಳಲಾಗಿದೆ:–

(1) ದಿನಾಂಕ: 16.09.2002ರಿಂದ 15.12.2002ರ ಅವಧಿಯಲ್ಲಿ ನೂಲು ಬಿಚ್ಚಾಣಿಕೆಗೆ ವಹಿವಾಟಾದ ಪ್ರತಿ ಕೆ.ಜಿ ಗೂಡಿಗೆ ರೂ. 10.00 ರಂತೆ ಪ್ರೋತ್ಸಾಹಧನ ನೀಡಲಾಗುತ್ತಿದೆ.

(2) ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕೆ ಮಂತ್ರಾಲಯವು ದಿ: 03.07.2003ರ ಆದೇಶದಲ್ಲಿ ಚೈನಾ ದೇಶವು ಆಂಟಿ ಡಂಪಿಂಗ್ ಶುಲ್ಕ ಸೇರಿ ಪ್ರತಿ ಕೆ.ಜಿ.ಗೆ 27–97 ಅಮೇರಿಕನ್ ಡಾಲರ್‌ಗಳಿಗೆ ಕಡಿಮೆ ಇಲ್ಲದ ದರದಲ್ಲಿ 2ಎ ಮತ್ತು ಅದಕ್ಕಿಂತ ಕಡಿಮೆ ಗುಣಮಟ್ಟದ ರೇಷ್ಮೆಯನ್ನು ಭಾರತ ದೇಶಕ್ಕೆ ರಫ್ತು ಮಾಡಬಹುದೆಂದು ಆದೇಶಿಸಿದೆ.

ಅದೇ ರೀತಿ ಜವಳಿ ಕುರಿತಂತೆ ಕೆಳಗಿನ ಕ್ರಮಗಳನ್ನು ಕೈಗೊಳ್ಳಲಾಗಿದೆ :–

1. ದೀನದಯಾಳ್ ಹತ್‌ಕರ್ಗಾ ಪ್ರೋತ್ಸಾಹಧನ ಯೋಜನೆಯಡಿ ಪ್ರೋತ್ಸಾಹಿಸಲಾಗುತ್ತಿದೆ.
2. ಕೈಮಗ್ಗ ನಿಗಮವನ್ನು ಪುನರುಜ್ಜೀವನಗೊಳಿಸುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.
3. ತಂತ್ರಜ್ಞಾನ ಉನ್ನತೀಕರಣ ನಿಧಿ ಯೋಜನೆ
4. ವಿದ್ಯುತ್ ಮಗ್ಗಗಳನ್ನು ಆಧುನೀಕರಣಗೊಳಿಸಲಾಗುತ್ತಿದೆ.
5. ಸಿದ್ದ ಉಡುಪು ಕ್ಷೇತ್ರವನ್ನು ಅಭಿವೃದ್ಧಿಪಡಿಸಲು, ಆಪರೆಲ್ ಪಾರ್ಕನ್ನು ಸ್ಥಾಪಿಸಲಾಗುತ್ತಿದೆ.

ಇ) ಬಂದಿಲ್ಲ.

ಈ) ಉದ್ಭವಿಸುವುದಿಲ್ಲ.

ಉ) ಆ ಕುರಿತಂತೆ ಈ ಕೆಳಗಿನ ಕ್ರಮಗಳನ್ನು ಕೈಗೊಳ್ಳಲಾಗಿದೆ.

1. ಹೊಸ ಡಿಸೈನ್‌ಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ.
2. ಅಭಿವೃದ್ಧಿಪಡಿಸಿದ ಡಿಸೈನ್‌ಗಳ ಉತ್ಪಾದನೆಗೆ ತರಬೇತಿ ನೀಡಲಾಗುತ್ತಿದೆ.
3. ಉತ್ಪಾದಿಸಿದ ಉತ್ಪನ್ನಗಳನ್ನು ಮಾರಾಟ ಮಾಡಲು ಜಿಲ್ಲಾ ಮಟ್ಟದ ಮೇಳಗಳನ್ನು ಹಾಗೂ ರಾಜ್ಯಮಟ್ಟದ ಮೇಳಗಳನ್ನು ಏರ್ಪಡಿಸಲಾಗುತ್ತಿದೆ.

ಶ್ರೀ ಎ.ಎಸ್. ಗುರುಸ್ವಾಮಿ : ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಲಾಗಿದೆ, ನಿಜ. ಈ ಉತ್ತರಗಳನ್ನು ಅವರ ಇಲಾಖೆಯವರು ಎಷ್ಟು ನೈಸ್ ಆಗಿ, ಬುದ್ಧಿ ವಂತಿಕೆಯಿಂದ ಕೊಟ್ಟಿದ್ದಾರೆ ಎಂದರೆ ವಾಸ್ತವಿಕ ಅಂಶಗಳಿಗೆ ಇದು ಬಹಳ ದೂರ ಇದೆ. ಸತ್ಯಕ್ಕೆ ದೂರ ಇದೆ, ಎನ್ನತಕ್ಕಂಥ ಕೆಲವು ವಿಚಾರಗಳನ್ನು ನಾನು ಪಾಯಿಂಟ್ ಔಟ್ ಮಾಡುತ್ತೇನೆ. "ರೇಷ್ಮೆ ಮತ್ತು ಜವಳಿ ಉದ್ದಿಮೆಯನ್ನು ಪುನರುಜ್ಜೀವನಗೊಳಿಸಲು ಹಿಂದಿನ ಜನಪ್ರಿಯತೆ ಗಳಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮ ಏನು?" ಎಂದು ನಾನು ಕೇಳಿದ್ದೇನೆ. ಅದಕ್ಕೆ ಏನು ಹೇಳುತ್ತಾರೆ ಎಂದರೆ ದಿನಾಂಕ: 16.9.2002ರಿಂದ

15.12.2002ವರೆಗೆ ಅವಧಿಯಲ್ಲಿ ನೂಲು ಬಿಚ್ಚಣಿಕೆ ವಹಿವಾಟನ್ನು ಪ್ರತಿ ಕೆ.ಜಿ. ಗೂಡಿಗೆ ಹತ್ತು ರೂಪಾಯಿ ಪೋತ್ಸಾಹಧನವನ್ನು ಕೊಡಲಾಗುತ್ತಿದೆ" ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಈ ಬೆಲೆ ಬಂದು ಬಿಟ್ಟಿತ್ತಾ ರೇಷ್ಮೆಗೆ? ಈಗಲೂ ರೇಷ್ಮೆಗೆ ಬೆಲೆ ಬಂದಿಲ್ಲ. ಅದು ಹೇಗಾಯಿತು? ಮುಂದುವರಿಸಿದ್ದಾರೆಯೇ ಇಲ್ಲವೆ? ಹಾಗೆಯೇ ಮುಂದೆ ಬಂದರೆ ದಿನಾಂಕ "3.7.2003ರ ಆದೇಶದಲ್ಲಿ ಚೈನಾ ದೇಶವು ಏನು ಆಂಟಿಡಂಪಿಂಗ್ ಶುಲ್ಕ ಸೇರಿಸಿ 20 ಡಾಲರ್ ಜಾಸ್ತಿ ಮಾಡಬೇಕೆಂದು ಏನೋ ಮಾಡಿದ್ದಾರೆ" ಎಂದು ಹೇಳಿದ್ದಾರೆ. ಅದು ಒಂದು ಕಡೆಗೆ ಇರಲಿ. ಅದು ಕೇಂದ್ರ ಸರ್ಕಾರಕ್ಕೆ ಸಂಬಂಧಪಟ್ಟಿದ್ದು. ಆದರೆ ಈ ಚೈನಾದಿಂದ ಇಂಪೋರ್ಟ್ ಶುರುವಾಯಿತಲ್ಲ, ಇದು ಯಾವಾಗ ಶುರುವಾಯಿತು? ಶುರುವಾದಾಗಿನಿಂದ ಏಕೆ ಇವರು ರೇಷ್ಮೆ ಬೆಳೆಗಾರರಿಗೆ ಪ್ರೋತ್ಸಾಹ ಧನವನ್ನು ಕೊಟ್ಟಿಲ್ಲ? ಇವರು Anti Dumbing Act ತಂದಿರುವುದು ಯಾವಾಗ ಎಂದರೆ 2003ನೇ ಇಸವಿಯಲ್ಲಿ ಈಗಲ್ಲ ಹತ್ತು-ಹದಿನೈದು ವರ್ಷಗಳಿಂದ ಬಹಳಷ್ಟು ಸಫರ್ ಮಾಡುತ್ತಿದ್ದಾರೆ. ಆದರೂ ಸಹ ದಿನಾಂಕ: 3.7.2003ರಿಂದ ಮಾತ್ರ ಚೈನಾ ದೇಶವು ಆಂಟಿ ಡಂಪಿಂಗ್ ಶುಲ್ಕ ಅಂತ ಏನೋ ಅಮೆರಿಕನ್ ಡಾಲರ್ ಎಂದು ಹೇಳುತ್ತಿದ್ದಾರೆ. ಅಲ್ಲಿಯತನಕ ಸಫರ್ ಆಯ್ತಲ್ಲಾ, ಅದರ ಬಗ್ಗೆ ಸರ್ಕಾರ ಏಕೆ ಗಮನಹರಿಸಿಲ್ಲ ಎನ್ನತಕ್ಕಂಥಾದ್ದು ಒಂದು ಪ್ರಶ್ನೆಯನ್ನು ತಮ್ಮ ಮೂಲಕ ಕೇಳುತ್ತಾ ಈ ವೆಸ್ಟೆಡ್ ಇಂಟರೆಸ್ಟ್‌ಗೆ ಎಷ್ಟರಮಟ್ಟಿಗೆ ಇಲಾಖೆಯವರು ಸಿದ್ಧರಿದ್ದಾರೆ ಎಂದು ಕೇಳಬೇಕಾಗುತ್ತದೆ. ಎಲ್ಲ ಒಟ್ಟಿಗೆ ಪ್ರಶ್ನೆ ಕೇಳಿಬಿಡುತ್ತೇನೆ ಮತ್ತು ಅವರು ಒಟ್ಟಿಗೆ ಉತ್ತರವನ್ನು ಹೇಳಿಬಿಡಲಿ. ಇವರು ಏನೋ ಬೇಕಾದಷ್ಟು ರೇಷ್ಮೆ ಬೆಳೆಗಾರರಿಗೆ ಪ್ರೊಟೆಕ್ಷನ್ ಕೊಡುವುದಕ್ಕೆ ಕಾರ್ಯಕ್ರಮ ಹಾಕಿಕೊಂಡಿದ್ದೇವೆ ಎಂದು ಹೇಳಿಕೊಂಡಿದ್ದಾರೆ. ಇಷ್ಟೆಲ್ಲ ಇವರ ಇಲಾಖೆಯವರು ಕ್ರಮ ತೆಗೆದುಕೊಂಡರೂ ಸಹ ಈ ಐದು ವರ್ಷದಲ್ಲಿ ರೇಷ್ಮೆ ಬೆಳೆಯುವಂತಹ ಭೂಮಿ ಎಕರೇಜ್ ಕಡಿಮೆ ಆಯಿತಲ್ಲ? ಇದು ಜಾಸ್ತಿಯಾಯಿತಾ ಅಥವಾ ಕಡಿಮೆ ಆಯಿತಾ? ಇದರ ಬಗ್ಗೆ ದಯವಿಟ್ಟು ತಿಳಿಸಬೇಕೆಂದು ನಾನು ಕೇಳುತ್ತೇನೆ. ಇವರು ಇಷ್ಟೆಲ್ಲ ಪ್ರೋತ್ಸಾಹ ಕೊಟ್ಟು ಕೆಲಸ ಮಾಡಿದ ಪಕ್ಷದಲ್ಲಿ ಏಕರೇಜ್ ಪ್ರಮಾಣ ನಮ್ಮ ರೇಷ್ಮೆ ಬೆಳೆಗಾರರದ್ದು ಈ ಐದು ವರ್ಷದಲ್ಲಿ ಕಡಿಮೆಯಾಯಿತಾ ಅಥವಾ ಜಾಸ್ತಿಯಾಯಿತಾ? ನಾನು ತಮ್ಮ ಮೂಲಕ ಇವರನ್ನು ಕೇಳುವುದೇನೆಂದರೆ ಇವರು ಕೈಗೊಂಡಂಥ ಇಂಪ್ರೂವ್‌ಮೆಂಟ್ಸ್ ಏಕೆ ಎಫೆಕ್ಟ್ ಆಗಲಿಲ್ಲ? ಇದನ್ನು ದಯಮಾಡಿ ಮಾನ್ಯ ಮಂತ್ರಿಗಳು ತಿಳಿಸಬೇಕೆಂದು ಕೋರುತ್ತೇನೆ.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು : ಸನ್ಮಾನ್ಯ ಅಧ್ಯಕ್ಷರೆ, ಇದೇ ಸದನದಲ್ಲಿ ಮಾನ್ಯ ಜವಳಿ ಮಂತ್ರಿಗಳು ನೇಕಾರರಿಗೆ ವಿದ್ಯುತ್‌ನ್ನು ಸಬ್ಸಿಡಿ ರೂಪದಲ್ಲಿ ಕೊಡುತ್ತೇವೆ ಎಂದು ಹೇಳಿದ್ದರು. ಅದೇ ರೀತಿಯಲ್ಲಿ ಬೆಂಗಳೂರು ಸುತ್ತಮುತ್ತಲಲ್ಲಿ ನೇಕಾರರಿಗೆ ಹೊಸದಾಗಿ ಒಂದು ಬಡಾವಣೆಯನ್ನು ಮಾಡುತ್ತೇವೆ ಎಂದು ಹೇಳಿದ್ದರು. ಮತ್ತು ಒಂದು ಕಡೆ ಈ ರೇಷ್ಮೆ ಬೆಳೆಗಾರರನ್ನು ತುಳಿಯುತ್ತಿರುವುದಕ್ಕೆ ಕಾರಣ ಏನು? ಮತ್ತು ಈ ಎರಡು ವಾಗ್ದಾನಗಳನ್ನು ಮಾಡಿದ್ದರಲ್ಲ, ಅದನ್ನು ಯಾವಾಗ ಪೂರೈಸುತ್ತೀರಿ?

7.10 ಪಿಎಂ

ಶ್ರೀ ಎಂ. ಮಹದೇವ್ : ಮಾನ್ಯ ಉಪಾಧ್ಯಕ್ಷರೆ, ರೇಷ್ಮೆ ಬೆಳೆ ಉದ್ಯಮ ಇತ್ತೀಚಿನ ದಿನಗಳಲ್ಲಿ ಕುಂಟುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಅದಕ್ಕೆ ಮೊದಲನೆಯ ಕಾರಣ, ವರ್ಷ ವರ್ಷ ಅದರ ಬೆಲೆ ಕಡಿಮೆಯಾಗುತ್ತಿರುವುದರಿಂದ ಅದರ ಕಡ್ಡಿಗಳನ್ನು ಕಿತ್ತು ಹಾಕುತ್ತಿರತಕ್ಕದ್ದು.

ಬೇರೆ ಬೇರೆ ಬೆಳೆಯಲು ಹೋಗುತ್ತಿರತಕ್ಕದ್ದು. ಎರಡನೆಯದಾಗಿ ಚೈನಾ ದೇಶದಿಂದ ಆಮದು ಮಾಡತಕ್ಕ ರೇಷ್ಮೆ ಭಾರತ ದೇಶದಕ್ಕೆ ಹೆಚ್ಚಾಗಿ ಬರುತ್ತಿರುವುದರಿಂದ ಅದರ ಪರಿಣಾಮವಾಗಿ ಬೆಲೆ ಕುಸಿಯಲು ಮುಖ್ಯವಾದ ಕಾರಣವಾಗಿದೆ. ಆದ್ದರಿಂದ ನಾವು ಭಾರತ ಸರ್ಕಾರದವರಿಗೆ ಆಮದು ಮಾಡಿಕೊಳ್ಳತಕ್ಕ ರೇಷ್ಮೆಗೆ ಕೊನೆಯ ಪಕ್ಷ ಐವತ್ತು ಪರ್‌ಸೆಂಟ್ ಶುಲ್ಕವನ್ನು ವಿಧಿಸಬೇಕೆಂದು ಹೇಳಿದ್ದೇವೆ. ಏಕೆಂದರೆ, ಅದನ್ನು ಬ್ಯಾನ್ ಮಾಡಲು ಕೇಂದ್ರ ಸರ್ಕಾರಕ್ಕೆ ಕಷ್ಟವಾಗುತ್ತದೆ. WTO, Liberalization, globalization ಇವೆಲ್ಲಾ ಇರುವುದರಿಂದ ಕೇಂದ್ರ ಸರ್ಕಾರದವರಿಗೂ ಇದನ್ನು ಬ್ಯಾನ್ ಮಾಡಲು ಕಷ್ಟವಾಗುತ್ತದೆ. totally silkನ್ನು import ಮಾಡಿಕೊಳ್ಳುವುದನ್ನು ಬ್ಯಾನ್ ಮಾಡಿ ಎಂದು ಹೇಳಲು ಬರುವುದಿಲ್ಲ. ಕರ್ನಾಟಕ ರಾಜ್ಯ ರೇಷ್ಮೆ ಉದ್ಯಮದಲ್ಲಿ ಹೆಸರುವಾಸಿಯನ್ನು ಪಡೆದಿರತಕ್ಕಂಥ ರಾಜ್ಯ. ಇದರಿಂದ ನಮಗೆ effect ಆಗುತ್ತಿದೆ. ಕೊನೆಯ ಪಕ್ಷ fifty percent ಆದರೂ ಶುಲ್ಕವನ್ನು ಅದರ ಮೇಲೆ ವಿಧಿಸಿ ಎಂದು ನಾವು ರಾಜ್ಯ ಸರ್ಕಾರದ ಪರವಾಗಿ ಕೇಂದ್ರ ಸರ್ಕಾರದವರಿಗೆ ಮನವಿ ಮಾಡಿದ್ದೇವೆ. ಆದ್ದರಿಂದ ರೇಷ್ಮೆ ಬೆಲೆ ಕುಂಟಿತವಾಗುತ್ತಿದೆ. ಕಳೆದ ಸಾಲಿನಲ್ಲಲಿ ಕೆ.ಜಿ.ಗೆ 70 ರೂಪಾಯಿಗಳಷ್ಟು ಬೆಲೆ ಇಳಿದಿತ್ತು. ಈಗ ಸುಮಾರು 130 ರೂಪಾಯಿಯಷ್ಟು ಸರಾಸರಿ ಬೆಲೆ ಹಚ್ಚಾಗಿದೆ. ಇದರಿಂದ ರೇಷ್ಮೆ ಬೆಳೆಗಾರರಿಗೆ ಸ್ವಲ್ಪ ಉಸಿರಾಡಲು ಅನುಕೂಲವಾಗಿದೆ. ಬರಗಾಲದ ಹಿನ್ನೆಲೆಯಿಂದಲೂ ಸ್ವಲ್ಪ ತೊಂದರೆಯಾಗುತ್ತಿದೆ. ರೇಷ್ಮೆ ಉದ್ಯಮವನ್ನು ಕರ್ನಾಟಕ ರಾಜ್ಯದಲ್ಲಿ ಅಭಿವೃದ್ಧಿಪಡಿಸಲು ರೈತರಿಗೆ ನೆರವನ್ನು ಮಾಡುತ್ತಿದ್ದೇವೆ. ಅನೇಕ ಅನುಕೂಲಗಳನ್ನು ಮಾಡಲು ಸರ್ಕಾರ ಪ್ರಯತ್ನ ಮಾಡುತ್ತಿದೆ. ಕೆ.ಹೆಚ್.ಡಿ.ಸಿ.ಯ ಬಗ್ಗೆ ಅವರು ಹೇಳಿದರು ಪವರ್‌ನ್ನು ಸಪ್ಲೈ ಮಾಡಿಕೊಡಿ, ನೇಕಾರರಿಗೆ ತೊಂದರೆಯಾಗುತ್ತಿದೆಯೆಂದು ಹೇಳಿದರು. ಸರ್ಕಾರ ನೇಕಾರರಿಗೆ ಪವರನ್ನು ಕಡಿಮೆ ಬೆಲೆಯಲ್ಲಿ ಒದಗಿಸಿಕೊಡುವುದಕ್ಕೆ ಪವರ್ ರೇಟನ್ನು ಕಡಿಮೆ ಮಾಡುವುದಕ್ಕೆ ಯೂನಿಟ್‌ಗೆ ಸಂಬಂಧಿಸಿದಂತೆ ನಮ್ಮ ರಾಜ್ಯದಲ್ಲಿ ಎಷ್ಟಿದೆ? ಆಂಧ್ರಪ್ರದೇಶದಲ್ಲಿ ಎಷ್ಟಿದೆ, ತಮಿಳುನಾಡಿನಲ್ಲಿ ಎಷ್ಟಿದೆ ಎಂಬುದನ್ನು ಅಧ್ಯಯನ ಮಾಡಿ ವರದಿ ತರಿಸಿಕೊಂಡು ಎಷ್ಟು ರಿಯಾಯಿತಿ ಕೊಡಲು ಸಾಧ್ಯವೋ ಅಷ್ಟನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಕಟ್ಟಾಸುಬ್ರಮಣ್ಯನಾಯ್ಡು : ಈಗಾಗಲೇ ತಮಿಳುನಾಡಿನಲ್ಲಿ ಇರುವಂತೆ ಮಾಡುವುದಾಗಿ ಇದೇ ಸದನದಲ್ಲಿ ಮಾನ್ಯ ಮಂತ್ರಿಗಳು ಹೇಳಿದ್ದರು. ತಮಿಳುನಾಡಿನಲ್ಲಿರುವ ಬ್ಲಾಕ್ ಸಿಸ್ಟಂನ್ನು ಇಲ್ಲೂ ತರುತ್ತೇವೆಂದು ಮಾನ್ಯ ಮಂತ್ರಿಗಳು ಹೇಳಿದ್ದರು.

ಉಪಾಧ್ಯಕ್ಷರು : ಅವರು ಈ ಪ್ರಶ್ನೆಯನ್ನು ಕೇಳಿದ್ದಾರೆ. ಗುರುಸ್ವಾಮಿಯವರೆ ತಾವು ಕೇಳಿ.

ಶ್ರೀ ಕಟ್ಟಾಸುಬ್ರಮಣ್ಯ ನಾಯ್ಡು : ಸರ್ಕಾರ ನೇಕಾರರಿಗೆ ಬಹಳ ತೊಂದರೆ ಮಾಡುತ್ತಿದೆ.

ಶ್ರೀ ಎ.ಎಸ್. ಗುರುಸ್ವಾಮಿ : ಮಾನ್ಯ ಉಪಾಧ್ಯಕ್ಷರೆ

ಉಪಾಧ್ಯಕ್ಷರು : ತಮಗೆ ಮಾತನಾಡಲು ಅವಕಾಶ ಕೊಟ್ಟಿದ್ದೇನೆ. ತಾವು ಮಾತನಾಡುವುದಾದರೆ ಮಾತನಾಡಿ.

ಶ್ರೀ ಕಟ್ಟಾಸುಬ್ರಮಣ್ಯನಾಯ್ಡು : ತಾವು ಮಾತನಾಡಬಾರದು ಎಂದರೆ ಹೇಗೆ? ನೇಕಾರರ ಸಮಸ್ಯೆ ಬಂದಾಗ ಮಾತನಾಡಬಾರದು ಎಂದರೆ ಹೇಗೆ? ದಯಮಾಡಿ ಹೇಳಿ.

ಉಪಾಧ್ಯಕ್ಷರು : ನೀವು ಪ್ರಶ್ನೆ ಕೇಳಲು ಅವಕಾಶವನ್ನು ಕೊಟ್ಟಿದ್ದೇನೆ. ಉಪ ಪ್ರಶ್ನೆ ಕೇಳಲು ಅವಕಾಶ ಕೊಟ್ಟಿದ್ದೇನೆ. ಒಬ್ಬರಿಗೆ ಎಷ್ಟು ಸಲ ಅವಕಾಶ ಕೊಡಬೇಕು? ಒಂದು ಸಲ ಅವಕಾಶ ಕೊಡಬಹುದು.

ಶ್ರೀ ಕಟ್ಟಾಸುಬ್ರಮಣ್ಯ ನಾಯ್ಡು : ನನಗೆ ಸಂಬಂಧಪಡದಿರುವುದನ್ನು ನಾನು ಕೇಳುವುದಿಲ್ಲ.

ಉಪಾಧ್ಯಕ್ಷರು : ಪ್ರಶ್ನೆಯನ್ನು ಯಾರು ಕೇಳಿರುತ್ತಾರೋ ಅವರಿಗೆ ಒಂದು ಬಿಟ್ಟು ಎರಡು ಉಪ ಪ್ರಶ್ನೆ ಕೇಳಲು ಅವಕಾಶ ಕೊಡುತ್ತೇವೆ. ನೀವು ಪ್ರಶ್ನೆ ಕೇಳಿದವರಲ್ಲ. ಆದರೂ ನಿಮಗೆ ಉಪ ಪ್ರಶ್ನೆ ಕೇಳಲು ಅವಕಾಶವನ್ನು ಮಾಡಿಕೊಟ್ಟೆ. ಆದರೂ ಪದೇ ಪದೇ ಉಪ ಪ್ರಶ್ನೆ ಕೇಳುತ್ತಿದ್ದರೆ ಹೇಗೆ? ಈಗಾಗಲೇ ಪ್ರಶ್ನೋತ್ತರ ಎರಡು ಗಂಟೆಗಳ ಮೇಲೆ ಆಗಿದೆ.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು : ತಮಗೆ ಸಮಾಧಾನವಾದರೆ, ನೇಕಾರರ ಸಮಸ್ಯೆಯ ಬಗ್ಗೆ ಮಾತನಾಡಬಾರದು ಎಂದು ತಾವು ಹೇಳಿದರೆ ನಾವು ಕುಳಿತುಕೊಳ್ಳುತ್ತೇವೆ.

ಉಪಾಧ್ಯಕ್ಷರು : ನೀವು ಪ್ರಶ್ನೆ ಕೇಳಿದಿರಿ, ಅವರು ಉತ್ತರವನ್ನು ಕೊಟ್ಟಿದ್ದಾರೆ.

ಶ್ರೀ ಕಟ್ಟಾಸುಬ್ರಮಣ್ಯ ನಾಯ್ಡು : ಅವರು ಸರಿಯಾಗಿ ಉತ್ತರವನ್ನು ಕೊಟ್ಟಿಲ್ಲ.

ಉಪಾಧ್ಯಕ್ಷರು : ಕೇಳಿದ್ದನ್ನೇ ಮತ್ತೆ ಕೇಳುತ್ತಿರುವುದೇ?

ಶ್ರೀ ಎ.ಎಸ್. ಗುರುಸ್ವಾಮಿ : ನನ್ನ ಮೂಲ ಪ್ರಶ್ನೆಗೆ ದಯಮಾಡಿ ಕ್ಲಾರಿಫಿಕೇಷನ್ ಕೊಡಬೇಕೆಂದು ತಮ್ಮ ಮೂಲಕ ಕೇಳುತ್ತಿದ್ದೇನೆ. ಮಾನ್ಯ ಮಂತ್ರಿಗಳೇನು ಉತ್ತರವನ್ನು ಕೊಟ್ಟಿದ್ದಾರೆ ಇದನ್ನು writing ನಲ್ಲೇ ಕೊಟ್ಟಿದ್ದಾರೆ. ಈಗ ಏನು explanation ಕೊಟ್ಟರು it is all in writing. My question is in between the questions in the sense, ಅದಕ್ಕೆ ನಾನು ಉತ್ತರವನ್ನು ಅಪೇಕ್ಷೆ ಪಡುತ್ತಿದ್ದೇನೆ. ದಿನಾಂಕ: 15.12.02 ರಿಂದ, ಅದೇನೋ ಎರಡು ಸಾವಿರದ ಇಸವಿಗೆ ನಿಲ್ಲಿಸಿಬಿಟ್ಟಿದ್ದಾರಲ್ಲಾ, ಮುಂದಕ್ಕೆ ಏಕೆ ಕೊಟ್ಟಿಲ್ಲ? ಹತ್ತು ರೂಪಾಯಿ ಪ್ರೋತ್ಸಾಹಧನವನ್ನೇನು ಕೊಡುತ್ತಿದ್ದೀರಲ್ಲಾ ಎಂದು ಕೇಳಿದರೆ, ಇವರೇನೋ ಬೇರೆ ಉತ್ತರವನ್ನು ಹೇಳಿದ್ದಾರೆ It is all there in writing. ಇವರು ಏನೇನೋ ಪ್ರೋತ್ಸಾಹಗಳನ್ನು ಮಾಡಿದ್ದೇವೆ, ಅಭಿವೃದ್ಧಿ ಮಾಡುತ್ತಿದ್ದೇವೆ, ರೇಷ್ಮೆ ಬೆಳೆಗಾರರಿಗೆ ಉತ್ತಮವಾಗಿ ಸಪೋರ್ಟ್ ಮಾಡಿದ್ದೇವೆಂದು ಹೇಳುತ್ತಿದ್ದಾರಲ್ಲಾ, ಇಷ್ಟೆಲ್ಲಾ ಮಾಡಿದ್ದರೂ ರೇಷ್ಮೆ ಬೆಳೆಯುವಂಥ ಎಕರೆವಾರು ಪ್ರದೇಶ ಕಡಿಮೆಯಾಯಿತಲ್ಲಾ ಏಕೆ? ಇದು ನನ್ನ ಮೂಲವಾದ in between the questions ಕೇಳುವಂಥ ಪ್ರಶ್ನೆ.

ಉಪಾಧ್ಯಕ್ಷರು : ಅವರ ಮೂಲಭೂತವಾದ ಪ್ರಶ್ನೆಗೆ ಉತ್ತರವನ್ನು ಹೇಳಿ.

ಶ್ರೀ ಎಂ. ಮಹದೇವ್ : ಮಾನ್ಯ ಉಪಾಧ್ಯಕ್ಷರೆ, In between the questions ಗೇ ನಾನೂ ಉತ್ತರವನ್ನು ಹೇಳಿರುವುದು ಏಕೆಂದರೆ, ರೇಷ್ಮೆ ಬೆಳೆ ಕಡಿಮೆಯಾಗುತ್ತಿರಲು ನಾನಾ ಕಾರಣಗಳು ಇದೆ. ಚೈನಾದಿಂದ ಬರುವ ರೇಷ್ಮೆ ಜಾಸ್ತಿ ಬರುತ್ತಿದೆ. ಅದರ ಬೆಲೆ ಕಡಿಮೆ ಇದೆ. ಇಲ್ಲಿಯದ್ದು ಜಾಸ್ತಿ ಬೆಲೆ ಇದೆ. ಇದು ಒಂದು ಕಾರಣ. ಮತ್ತು ಹವಾಮಾನದ ಪರಿಸ್ಥಿತಿ, ಮಳೆಗಾಲದ ಪರಿಸ್ಥಿತಿ, ಪ್ರಕೃತಿ ಇವೆಲ್ಲಾ ರೇಷ್ಮೆ ಬೆಳೆಗೆ ಸಾಕಷ್ಟು ಅನುಕೂಲವಿಲ್ಲದಿರುವುದರಿಂದ ಬೇರೆ ಬೆಳೆಗೆ short duration cropsಗೆ ಹೋಗುತ್ತಿದ್ದಾರೆ. ಆದ್ದರಿಂದ ಕಡ್ಡಿಗಳನ್ನು ಕಿತ್ತುಹಾಕುತ್ತಿದ್ದಾರೆ. ಈ ರೀತಿ ರೇಷ್ಮೆ ಕಡ್ಡಿಗಳನ್ನು ಕಿತ್ತು ಹಾಕುತ್ತಿರುವ ಸಂದರ್ಭದಲ್ಲಿ ಹೆಚ್ಚು ರೇಷ್ಮೆ ಬೆಳೆ ಬರಲಿಲ್ಲವೆಂದರೆ ನಾವು ಏನು ಹೇಳಲು ಸಾಧ್ಯವಾಗುತ್ತದೆ? ರೈತರಿಗೆ ಇವತ್ತಿನ ಪರಿಸ್ಥಿತಿಗೆ ಯಾವ ಬೆಳೆ

ಅನುಕೂಲವಾಗಿದೆಯೊ ಆ ಬೆಳೆಗೆ ಹೋಗತಕ್ಕದ್ದು ಸಹಜ. ಆದ್ದರಿಂದ ಸಹ ರೇಷ್ಮೆ ಬೆಳೆ ಕಡಿಮೆಯಾಗುತ್ತಿದೆ.

ಶ್ರೀ ಆರ್. ಅಶೋಕ್ : ಬೆಂಗಳೂರು ಕನಕಪುರ ರಸ್ತೆಯ ಕಗ್ಗಲಿಪುರದಲ್ಲಿ ರೇಷ್ಮೆ ಸಂಶೋಧನಾ ಕೇಂದ್ರವಿದೆ. ಕಳೆದ ನಾಲ್ಕು ವರ್ಷದಿಂದ ಅಲ್ಲಿರುವವರಿಗೆ ನಾಲ್ಕು ನಾಲ್ಕು ತಿಂಗಳು ಸಂಬಳವನ್ನೇ ಕೊಟ್ಟಿಲ್ಲ.

ಶ್ರೀ ಎಂ. ಮಹದೇವ್ : ಅದರ ಬಗ್ಗೆ ಪ್ರತ್ಯೇಕವಾದ ಪ್ರಶ್ನೆ ಹಾಕಿದರೆ ನಾನು ಉತ್ತರವನ್ನು ಕೊಡುತ್ತೇನೆ.

ಶ್ರೀ ಆರ್. ಅಶೋಕ್ : ರೇಷ್ಮೆ ಬೆಳೆ ಏಕೆ ಕಡಿಮೆಯಾಗಿದೆ ಎಂಬ ಬಗ್ಗೆ ತಾವೇ ಹೇಳಿದ್ದೀರಲ್ಲಾ. ರೈತರಿಗೆ ನಾವು ಉತ್ತೇಜನವನ್ನು ಕೊಡುತ್ತಿದ್ದೇವೆ. ಆದರೂ ರೇಷ್ಮೆ ಬೆಳೆ ಕಡಿಮೆಯಾಗಿದೆಯೆಂದು ತಾವೇ ಹೇಳಿದಿರಿ. ತಾವು ಇದರ ಬಗ್ಗೆ ಸಂಶೋಧನೆ ಮಾಡುವವರಿಗೆ ಕಳೆದ ನಾಲ್ಕು ತಿಂಗಳಿನಿಂದ ಸಂಬಳವನ್ನೇ ಕೊಟ್ಟಿಲ್ಲ. ಅವರು ಸಂಶೋಧನೆ ಮಾಡಲು ಕಳೆದ ನಾಲ್ಕು ವರ್ಷದಿಂದ ಒಂದು ನಯಾ ಪೈಸೆ ಬಿಡುಗಡೆ ಮಾಡಿಲ್ಲ. ಸುಮಾರು 16 ಜನ ಸಂಶೋಧನೆ ಮಾಡತಕ್ಕ ಸೈಂಟಿಸ್ಟ್‌ಗಳಿದ್ದಾರೆ. ಇನ್ನು ರೈತರು ಉದ್ದಾರ ಆಗು ಎಂದರೆ ಹೇಗೆ ಆಗುತ್ತಾರೆ.

ಶ್ರೀ ಎಂ. ಮಹದೇವ್ : ಅವರು ಪ್ರತ್ಯೇಕವಾದ ಪ್ರಶ್ನೆಯನ್ನು ಕೊಡಲಿ. ನಾನು ವಿವರವನ್ನು ಕೊಡುತ್ತೇನೆ.

ಶ್ರೀ ಆರ್. ಅಶೋಕ್ : ತಾವು ಬೆಳೆ ಏಕೆ ಕಡಿಮೆಯಾಗಿದೆ ಎಂದು ಹೇಳಿದ್ದಕ್ಕೆ ನಾನು ಕೇಳಿದೆ.

ಶ್ರೀ ಎ.ಎಸ್. ಗುರುಸ್ವಾಮಿ : ರೇಷ್ಮೆ ಬೆಳೆಗಾರರಿಗೆ ಉತ್ತಮವಾದ ಬೆಲೆ ಸಿಗುವುದಿಲ್ಲ. ಏಕೆಂದರೆ vested interest ಇಲ್ಲಿ work ಆಗುತ್ತಿದೆ. effect ಇದೆ. ಅದನ್ನು counter ಮಾಡಲು ಇಲಾಖೆಯವರೇನು ಕ್ರಮ ತೆಗೆದುಕೊಂಡಿದ್ದೀರಿ? ಮಂತ್ರಿಗಳೇನು ಕಾರ್ಯಕ್ರಮ ಹಾಕಿಕೊಂಡಿದ್ದಾರೆ? ಮಳೇಯಾಗಿಲ್ಲ, ಬೆಳೆಯಾಗಿಲ್ಲ, ಪ್ರವಾಹ ಅದನ್ನೆಲ್ಲಾ ನಾನು ಕೇಳುತ್ತಿಲ್ಲ. It is a question in between the questions.

ಶ್ರೀ ಎಂ. ಮಹದೇವ್ : ಇದರಲ್ಲಿ vested interest ಏನಿದೆ? I am very very sorry. ಮಂತ್ರಿಗಳು ಏನು vested interest ಇದೆ ಎನ್ನತಕ್ಕದನ್ನು ಅವರು ತೋರಿಸಲಿ. He should prove with facts and figures. ಈ ರೀತಿ ಮಾತನಾಡಿಬಿಟ್ಟರೆ ಏನು ಅರ್ಥವಿದೆ?

ಶ್ರೀ ಎ.ಎಸ್. ಗುರುಸ್ವಾಮಿ : ಮಾನ್ಯ ಮಂತ್ರಿಗಳು ಇದನ್ನು ವೈಯಕ್ತಿಕವಾಗಿ ತೆಗೆದುಕೊಳ್ಳಬಾರದು.

ಶ್ರೀ ಎಂ. ಮಹದೇವ್ : ಮಾನ್ಯ ಅಧ್ಯಕ್ಷರೆ, No. No. I am very very sorry. You must prove it. ರೇಷ್ಮೆ ಮಂತ್ರಿಗಳಿಗೆ ಇದರಲ್ಲಿ ಏನು vested interest ಇದೆ? ನಾವು ನಮ್ಮ ರೈತರ ಬಗ್ಗೆ ಇಲ್ಲಿ ಎಷ್ಟೊಂದು development ಮಾಡುತ್ತಿದ್ದೇವೆ.

ಶ್ರೀ ಎ.ಎಸ್. ಗುರುಸ್ವಾಮಿ : ಇದು ನಿಮಗಲ್ಲ ಸ್ವಾಮಿ. Why do you mistake me I say? ನಾನು ಇವರದಲ್ಲ vested interest ಹೇಳುತ್ತಿರುವುದು. I am not charging him.

ಶ್ರೀ ಎಂ. ಮಹದೇವ್ : ಮಾನ್ಯ ಉಪಾಧ್ಯಕ್ಷರೆ, When you have said something, there must be some facts.

ಶ್ರೀ ಎ.ಎಸ್. ಗುರುಸ್ವಾಮಿ : ಸ್ವಾಮಿ I am charging vested interest group work ಮಾಡುತ್ತಿದೆ ಎಂದು ಹೇಳಿದ್ದು. ನಿಮ್ಮನ್ನು ಮಾಡುತ್ತಿದ್ದಾರೆಂದು ಯಾರು ಹೇಳಿದ್ದು?

ಶ್ರೀ ಎಂ. ಮಹದೇವ್ : ಸ್ವಾಮಿ Vested interest ಎಂದರೆ ಇನ್ಯಾರು?

ಶ್ರೀ ಎ.ಎಸ್. ಗುರುಸ್ವಾಮಿ : ಅದು ಎಲ್ಲೋ work ಮಾಡುತ್ತದೆ I am not charging you.

ಶ್ರೀ ಎಂ. ಮಹದೇವ್ : ಅದು ಹೊರಗಡೆಯಾಯಿತು. Vested interest ಹೊರಗಡೆಯಾಯಿತು. Don't involve the Ministers.

Sri. A.S. Guruswamy : I am not charging you. I am very sorry I tell you.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಮಂತ್ರಿಗಳು ಅನಾವಶ್ಯಕವಾಗಿ ಸದಸ್ಯರನ್ನು ತಪ್ಪು ತಿಳಿದುಕೊಂಡಿದ್ದಾರೆ. ಅವರು ರೇಷ್ಮೆ ವ್ಯವಸಾಯದ ಬಗ್ಗೆ international forces ಏನು ಕೆಲಸ ಮಾಡುತ್ತಿದೆ, ಕೇಂದ್ರ ಸರ್ಕಾರ, ರೇಷ್ಮೆ ಮಂಡಳಿ, ಟ್ರೇಡರ್ಸ್ ಇದರ ಬಗ್ಗೆ ಹೇಳಿದರೆ Why do you take it so personally? You must appreciate him. He did not mean it. I have been observing.

ಶ್ರೀ ಎಂ. ಮಹದೇವ್ : ಕೇಂದ್ರ ರೇಷ್ಮೆ ಮಂಡಳಿ, ನಮ್ಮ ಸರ್ಕಾರ ಎರಡೂ ಸೇರಿ ರೈತರ ಹಿತವನ್ನು ಕಾಪಾಡುತ್ತಿದೆ. ನಮ್ಮನ್ನೂ ಅವರ ಜೊತೆ co-ordinate ಮಾಡಿಕೊಂಡು ಕೇಂದ್ರದಿಂದ ಏನು ಸಬ್ಸಿಡಿ ಬರುತ್ತಿದೆ, ನಾವೇನು ಸಬ್ಸಿಡಿಯನ್ನು ಕೊಡಬೇಕು. ರೈತರಿಗೆ ಯಾವ ರೀತಿ ಸಹಾಯ ಮಾಡಬೇಕು ಎಂಬ ಬಗ್ಗೆ ನಾವು ಗಂಭೀರವಾಗಿ ಕಾರ್ಯಕ್ರಮಗಳನ್ನು ರೈತರಿಗೆ ಕೊಡುತ್ತಿದ್ದೇವೆ. ಹೊರಗಡೆ ಯಾರದ್ದಾದರೂ interest ಇದ್ದರೆ ಅದನ್ನು ಕೇಂದ್ರ ಸರ್ಕಾರ ನೋಡಬೇಕೇ ಹೊರತು ರಾಜ್ಯ ಸರ್ಕಾರವೇನೂ ಮಾಡಲು ಆಗುವುದಿಲ್ಲ.

ಶ್ರೀ ಎ.ಎಸ್. ಗುರುಸ್ವಾಮಿ : ಇಲ್ಲಿ personal ಆಗಿ ತೆಗೆದುಕೊಳ್ಳಬೇಕಾದ ಅವಶ್ಯಕತೆ ಇಲ್ಲ. That is what I wanted, that's all. Why he should take personally?

ಶ್ರೀ ಎಂ. ಮಹದೇವ್ : ನಾನು as a minister ಉತ್ತರವನ್ನು ಹೇಳುತ್ತಿದ್ದೇನೆ. as a member ಅವರು ಕೇಳುತ್ತಿದ್ದಾರೆ. ಇದರಲ್ಲಿ personal ಏನೂ ಇಲ್ಲ.

ಶ್ರೀ ಜಗದೀಶ್‌ಶೆಟ್ಟರ್ : ಮಾನ್ಯ ಉಪಾಧ್ಯಕ್ಷರೆ, ರೇಷ್ಮೆ ಕೃಷಿ ಇಡೀ ರಾಜ್ಯದಲ್ಲಿ ಬೆಳವಣಿಗೆಯಾಗಬೇಕು. ಹಳೆ ಮೈಸೂರು ಭಾಗದಲ್ಲಿ ಇದು ಜಾಸ್ತಿ ಇದೆ. ಉತ್ತರ ಕರ್ನಾಟಕ ಭಾಗದಲ್ಲಿ ಈಗ ರೇಷ್ಮೆ ಕೃಷಿಯ ಬಗ್ಗೆ ಹೆಚ್ಚು ಮಹತ್ವ ಬರುತ್ತಿದೆ. ಆದರೆ ರೇಷ್ಮೆ ಪ್ರದರ್ಶಕರು ಎಂಬ ಹುದ್ದೆಗಳೇನಿದೆ, ನನಗೆ ಬಂದ ಮಾಹಿತಿಯ ಪ್ರಕಾರ ಉತ್ತರ ಕರ್ನಾಟಕದಲ್ಲಿದ್ದಂಥ ಸುಮಾರು ಎರಡುನೂರಕ್ಕಿಂತ ಹೆಚ್ಚು ಹುದ್ದೆಗಳನ್ನು ಈ ಭಾಗಕ್ಕೆ ವರ್ಗಾವಣೆ ಮಾಡುತ್ತಿದ್ದೀರಿ. ಅಂದರೆ ಆ ಹುದ್ದೆಗಳನ್ನು ರದ್ದು ಮಾಡುವಂಥದ್ದು ನಡೆಯುತ್ತಿದೆ ಎಂಬ ಸುದ್ದಿ ಬಂದಿದೆ. ದಯಮಾಡಿ ಆ ರೀತಿ ಮಾಡಲು ಹೋಗಬೇಡಿ. ಮೈಸೂರು ಭಾಗದಲ್ಲಿ ಇನ್ನೂ ಹೆಚ್ಚು ಹುದ್ದೆಗಳ ಅವಶ್ಯಕತೆ ಇದ್ದರೆ ಹೆಚ್ಚಿಗೆ ತೆಗೆದುಕೊಳ್ಳಿ. ಆದರೆ ಆ ಭಾಗದಲ್ಲಿರುವ ಎರಡುನೂರಕ್ಕಿಂತ ಹೆಚ್ಚು ಹುದ್ದೆಗಳನ್ನು ರದ್ದು

ಮಾಡುತ್ತಾರೆ. ಈ ಭಾಗಕ್ಕೆ ವರ್ಗಾವಣೆ ಮಾಡುತ್ತಾತೆ ಎಂಬ ಮಾಹಿತಿ ಇದೆ. ಅದಕ್ಕೆ ಇದರ ಬಗ್ಗೆ ಸ್ಪಷ್ಟೀಕರಣ ಮಾಡಬೇಕು.

ಶ್ರೀ ಎಂ. ಮಹದೇವ್ : ಮಾನ್ಯ ಉಪಾಧ್ಯಕ್ಷರೆ, ಹಳೆಯ ಮೈಸೂರು ಭಾಗದಲ್ಲಿ ಮಾತ್ರ ರೇಷ್ಮೆ ಬೆಳೆ ಬಹಳ ಹೆಸರುವಾಸಿಯನ್ನು ಪಡೆದಿತ್ತು. ಉತ್ತರ ಕರ್ನಾಟಕದ ಭಾಗದಲ್ಲೂ ಈ ಉದ್ಯಮ ಅಭಿವೃದ್ಧಿಯಾಗಬೇಕು ಎಂಬುದು ಸರ್ಕಾರದ ಉದ್ದೇಶ. ಅಲ್ಲಿಯೂ ಸಹ ಒಳ್ಳೆಯ ಭೂಮಿ ಇದೆ. ನೀರಾವರಿ ಸೌಕರ್ಯ ಇದೆ. ಕೆಲವು ಜಿಲ್ಲೆಗಳಲ್ಲಿ ಒಳ್ಳೆಯ ಹವಾಮಾನ ಇದೆ. ಆದ್ದರಿಂದ, ಉತ್ತರ ಭಾಗದಲ್ಲೂ ಸಹ ಸರ್ಕಾರ ರೇಷ್ಮೆ ಉದ್ಯಮವನ್ನು ಬೆಳೆಸಬೇಕು. ಪ್ರೋತ್ಸಾಹ ಕೊಡಬೇಕೆಂಬ ಉದ್ದೇಶ ಇದೆ. ಅಲ್ಲಿಗೆ ಅಗತ್ಯವಾಗಿರತಕ್ಕಂಥ ಸಿಬ್ಬಂದಿಯ ವ್ಯವಸ್ಥೆಯನ್ನು ಸರ್ಕಾರ ಮಾಡಿದೆ. ಮಾನ್ಯ ಸದಸ್ಯರ ಅಭಿಪ್ರಾಯವನ್ನೂ ಗಮನಿಸಿದ್ದೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ರೇಷ್ಮೆ ಸಚಿವರು ದಯಮಾಡಿ ಒಂದು ವಿಷಯವನ್ನು ಗ್ರಹಿಸಬೇಕು. ಈ ತಲಘಟ್ಟಪುರದಲ್ಲಿ ಏನು ಸಂಸ್ಥೆ ಇದೆ. that has almost come to the lost edge of closing down. ಅಲ್ಲಿರತಕ್ಕ ವಿಜ್ಞಾನಿಗಳಿಗೆ ಸಂಬಳ ಇಲ್ಲ. ಇದು ನಿಮ್ಮ ಕ್ಷೇತ್ರದಲ್ಲಿ ಬರುತ್ತದೆ. ನನಗೆ ಅರ್ಥವಾಗುತ್ತಿಲ್ಲ. ಸ್ಯಾಲರಿ ಕಾಂಪೊನೆಂಟ್ ಸಹಿತ ಇಲ್ಲ. ಅಂತಹ ಸಂದರ್ಭಕ್ಕೆ ಬಂದಿದೆ. ಅದಕ್ಕೆ ನಾನೇನು ಸಲಹೆ ಮಾಡುತ್ತೇನೆಂದರೆ, ಮೊನ್ನೆ ಕೇಂದ್ರಸರ್ಕಾರದವರು ತೆಗೆದುಕೊಂಡಿರತಕ್ಕ ಕ್ರಮದಿಂದಾಗಿ ಒಂದು ವಾರದಿಂದ ಸ್ವಲ್ಪ ರೇಷ್ಮೆ ಬೆಳೆಗಾರರಿಗೆ ಜೀವ ಬಂದಹಾಗೆ ಕಾಣುತ್ತಿದೆ. ರೇಷ್ಮೆ ಗೂಡಿನ ಮಾರುಕಟ್ಟೆಯಲ್ಲಿ ಬೆಲೆಗಳು ಜಾಸ್ತಿಯಾಗಿರುವಂಥಾದ್ದು ಒಂದು ಆಶಾದಾಯಕವಾಗಿರತಕ್ಕಂಥ ವಿಚಾರ. That is the only Institute in the entire Country which is a premier institution which is doing some basic research work. ದಯಮಾಡಿ, ಅದರ ಸಹಾಯಕ್ಕೆ ಬರಲಿಕ್ಕೆ ಸಾಧ್ಯವೇ?

ಶ್ರೀ ಎಂ. ಮಹದೇವ್ : ಮಾನ್ಯ ಸಿಂಧ್ಯಾರವರು ಉತ್ತಮವಾದಂಥ ಸಲಹೆಯನ್ನು ಕೊಟ್ಟಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಅದರ ಬಗ್ಗೆ ವಿಚಾರವನ್ನು ಪ್ರಸ್ತಾಪ ಮಾಡಿ, ಆ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಜಾತಿ ಪ್ರಮಾಣ ಪತ್ರ ನೀಡಿಕೆ

614 (5171) : ಶ್ರೀ ನಾರಾಯಣಸ್ವಾಮಿ ಎ. (ಆನೇಕಲ್) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಜಾತಿ ಪ್ರಮಾಣಪತ್ರಗಳನ್ನು ನೀಡಲು ಅನುಸರಿಸುತ್ತಿರುವ ಮಾನದಂಡಗಳೇನು;

ಆ) ರಾಜ್ಯವ್ಯಾಪಿ ಒಂದೇ ಕ್ರಮವನ್ನೇ ಅನುಸರಿಸಲಾಗುವುದೇ ಅಥವಾ ಬೇರೆಬೇರೆ ಕ್ರಮಗಳನುಸಾರ ಜಾತಿ ಪ್ರಮಾಣಪತ್ರ ನೀಡಲಾಗುತ್ತಿದೆಯೇ;

ಇ) ಜಾತಿ ಪ್ರಮಾಣಪತ್ರಗಳನ್ನು ಒಮ್ಮೆ ಪಡೆದರೆ ಅದನ್ನು ನೀಡಿದ ಪ್ರಾಧಿಕಾರ ರದ್ದುಪಡಿಸುವವರೆಗೆ ಚಾಲನೆಯಲ್ಲಿರುವ ಬಗ್ಗೆ ಕೇಂದ್ರ ಸರ್ಕಾರದ ಸುತ್ತೋಲೆ ಇರುವುದು ಸರ್ಕಾರದ ಗಮನಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ ಜಾತಿ ಪತ್ರ ನೀಡುವಾಗ ಎಸ್‌ಸಿ:ಎಸ್‌ಟಿಯವರಿಗೆ 5 ವರ್ಷ ಹಾಗೂ ಇತರೆ ವರ್ಗದ ಜಾತಿ ಪ್ರಮಾಣಪತ್ರಕ್ಕೆ ಒಂದುವರ್ಷಗಳ ಅವಧಿ ಸೀಮಿತಗೊಳಿಸಿ ನೀಡುತ್ತಿರುವುದು ಸರಿಯೇ;